ಮೈಸೂರು ನಗರದ ಕನ್ನೇಗೌಡನ ಕೊಪ್ಪಲಿನಲ್ಲಿರುವ ರುದ್ರಭೂಮಿಯನ್ನು ಅಲ್ಲಿಯ ನಿವಾಸಿಗಳಿಗೇ ಬಿಟ್ಟುಕೊಡುವ ಬಗ್ಗೆ.

ಶ್ರೀ ವೇದಾಂತ ಹೆಬ್ಬಿಗೆ (ಕೃಷ್ಣರಾಜ).—ಮಾನ್ಯ ಅಧ್ಯಕ್ಷರೇ, ಮೈಸೂರು ನಗರದ ಕನ್ನೇಗೌಡನ ಕೊಪ್ಪಲಿನಲ್ಲಿ ಶೇಕಡ ೯೦ ರಷ್ಟು ಜನ ಒಕ್ಕಲುತನದಿಂದ ವಾಸ ಮಾಡುತ್ತಿದ್ದಾರೆ. ಇಲ್ಲಿಯ ಜನರಿಗೆ ಸೇರಿದ ಸುಮಾರು ೩೦೦೦ ಎಕರೆಗಳಷ್ಟು ಭೂಮಿಯನ್ನು ನಗರಾಭಿವೃದ್ಧಿ ಸಮಿತಿ ವಶಪಡಿಸಿಕೊಂಡು ನಿವೇಶನಗಳನ್ನಾಗಿ ಮಾಡಿ ಹಂಚಿದೆ. ಇಲ್ಲಿಯ ಜನರಿಗೆ ಜಯನಗರದ ಬಳಿ ಒಂದು ರುದ್ರಭೂಮಿಯಿದೆ ಸುಮಾರು ೮೦ ವರ್ಷಗಳಿಂದ ಇಲ್ಲಿಯ ಜನರು ಇದನ್ನು ಉಪಯೋಗಿಸುತ್ತಿದ್ದಾರೆ. ದಯವಿಟ್ಟು ಸರ್ಕಾರ ಈ ರುದ್ರಭೂಮಿಯನ್ನು ಇವರಿಗೇ ಉಳಿಸಿಕೊಟ್ಟು ಹೆಣವನ್ನು ಹೂಳಲು ಅಥವಾ ಸುಡಲು ಇರುವ ಸೌಕರ್ಯ ಕಸಿದುಕೊಳ್ಳಬಾರದೆಂದು ಒತ್ತಾಯಿಸಿ ಇದರ ಬಗ್ಗೆ ಸಂಬಂಧಪಟ್ಟ ಸಚಿವರ ಗಮನ ಸೆಳೆಯಲು ಇಚ್ಛಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಮಾನ್ಯ ಕಾನೂನು ಹಾಗೂ ಸಂಸದೀಯ ವ್ಯವಹಾರ ನಗರಾಭಿವೃದ್ಧಿ ಸಚಿವರು).—ಮಾನ್ಯ ಅಧ್ಯಕ್ಷರೆ, ಇದು ನನ್ನ ಇಲಾಖೆಗೆ ಸಂಬಂಧಪಟ್ಟಿದು. ಅಲ್ಲಿಯ ಪರಿಸ್ಥಿತಿ ನನಗೆ ಗೊತ್ತಿಲ್ಲ. ಅಲ್ಲಿಂದ ವರದಿಯನ್ನು ತರಿಸಿ ಮಾನ್ಯ ಸದಸ್ಯರಿಗೆ ತಿಳಿಸುತ್ತೇನೆ.

ಶ್ರೀ ವೇದಾಂತ ಹೆಬ್ಬಿಗೆ.—ಮಾನ್ಯ ಅಧ್ಯಕ್ಷರೆ.....

ಶ್ರೀ ಎ. ಲಕ್ಷ್ಮೀಸಾಗರ್.—ಇದರ ಮೇಲೆ ಮತ್ತೆ ಪ್ರಶ್ನೆಯನ್ನು ಕೇಳುವಂತಿಲ್ಲ.

ಶ್ರೀ ವೇದಾಂತ ಹೆಬ್ಬಿಗೆ.—ಮಾನ್ಯ ಅಧ್ಯಕ್ಷರೇ.....

ಅಧ್ಯಕ್ಷರು.—ಹಾಗೆ ಮಾತನಾಡುವುದಕ್ಕೆ ಬರುವುದಿಲ್ಲ.

ಶ್ರೀ ವೇದಾಂತ ಹೆಬ್ಬಿಗೆ.—ಇದು ಹೆಣ ಸುಡತಕ್ಕ ಜಾಗ, ಇದನ್ನು ಕಸಿದುಕೊಳ್ಳುವುದಕ್ಕೆ ಬಿಡುವುದಿಲ್ಲವೆಂದು ಒಂದು ಭರವಸೆಯನ್ನು ಈ ಸಭೆಗೆ ಕೊಡಬಿದ್ದರೆ ಏನು ಆರ್ಥ ಎಂದು ಕೇಳುತ್ತೇನೆ. ಅಲ್ಲಿ ಒಂದು ರುದ್ರಭೂಮಿ ಇದೆ. ಸುಮಾರು ೮೦ ವರ್ಷದಿಂದ ಅಲ್ಲಿನ ಜನರು ಆ ಜಾಗವನ್ನು ಉಪಯೋಗಿಸುತ್ತಿದ್ದಾರೆ. ಇದನ್ನು ಉಳಿಸಿಕೊಡಿ ಎಂದು ಕೇಳುತ್ತಿದ್ದೇವೆ, ಇಲ್ಲದಿದ್ದಲ್ಲಿ ನಾವು ಏತಕ್ಕೆ ಇಲ್ಲಿಗೆ ಬರಬೇಕು ? ನಾವು ಮಾಡುತ್ತೇವೆ, ನಾವು ನೋಡುತ್ತೇವೆ ಎಂದು ನೀವು ಹೇಳುವುದಾದರೆ ಇದರ ಅರ್ಥ ಏನು ಸ್ವಾಮಿ ? ನಮಗೆ ಈ ಸಭೆಯೇ ಬೇಕಾಗಿಲ್ಲ. ಈ ೩ ಸಾವಿರ ಎಕರೆಯನ್ನ ಅವರಿಂದ ವಶಪಡಿಸಿಕೊಂಡು ಬೇರೆ ಜನರಿಗೆ ಕೊಟ್ಟಿದ್ದೀರಿ. ೮೦ ವರ್ಷದಿಂದ ಇರತಕ್ಕ ಈ ರುದ್ರಭೂಮಿಯನ್ನು ಈ ಸರ್ಕಾರಕ್ಕೆ ಉಳಿಸಿಕೊಳ್ಳುತ್ತೇವೆಂದು ಹೇಳುವುದನ್ನು ಬಿಟ್ಟು ಯಾರಿಗೋ ಕೊಡುತ್ತೀರಾ ?

ಅಧ್ಯಕ್ಷರು —ಮಾನ್ಯ ರಾಜವರ್ಧನ್‌ರವರೇ, ನೀವು ಎದ್ದು ಹೋಗಿ ಅವರ ಕೈ ಹಿಡಿದು ಕೂಡಿಸಿರಿ.

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಅಧ್ಯಕ್ಷರೇ ಇದು ಹೆಣ ಸುಡತಕ್ಕ ಜಾಗದ ಪ್ರಶ್ನೆ ಇದೆ. ಆ ರುದ್ರಭೂಮಿಯನ್ನು ಭದ್ರಪಡಿಸಬೇಕೆಂದು ಹೇಳುತ್ತಿದ್ದಾರೆ. ಇದನ್ನು ತಾವು ಸ್ಪಷ್ಟಪಡಿಸಬೇಕು.

ಅಧ್ಯಕ್ಷರು.—ಮಾನ್ಯ ಲಕ್ಷ್ಮೀಸಾಗರ್‌ರವರೇ ಮತ್ತೊಮ್ಮೆ ತಾವೇ ಹೇಳಿ.

ಶ್ರೀ ಎ ಲಕ್ಷ್ಮೀಸಾಗರ್.—ಸ್ವಾಮಿ ನಾನು ಪೂರ್ವಾಪರ ತಿಳಿದುಕೊಳ್ಳದೇ ಏನು ಉತ್ತರವನ್ನು ಕೊಡುವುದು ? ತಪ್ಪು ಉತ್ತರವನ್ನು ಕೊಡುವುದಕ್ಕಾಗುವುದಿಲ್ಲ. ಅಥವಾ ನಾನು ಊಹೆ ಮಾಡಿ ಕೊಂಡು ಉತ್ತರ ಹೇಳತಕ್ಕ ಪ್ರಶ್ನೆ ಇದಲ್ಲ. ಆದರೆ ಅವರು ಹೇಳಿರತಕ್ಕದ್ದು ಬಹಳ ಲಘುವಾಗಿ ತೆಗೆದಂ ಕೊಳ್ಳತಕ್ಕೆ ವಿಚಾರವೆಂದೂ ಕೂಡ ನಾನು ಹೇಳುವುದಿಲ್ಲ. ಆದ್ದರಿಂದ ಈ ವಿಚಾರದ ಬಗ್ಗೆ ಮಾಹಿತಿ ಯನ್ನು ತಿಳಿದುಕೊಂಡು ಉತ್ತರ ಕೊಡುತ್ತೇನೆಂದು ನಾನು ಮಾನ್ಯ ಸದಸ್ಯರಿಗೆ ಹೇಳಿದ್ದೇನೆ.

(ಗೊಂದಲ)

ಶ್ರೀ ಎ. ಲಕ್ಷ್ಮೀಸಾಗರ್.—ಇರಬಹುದು ಸ್ವಾಮಿ, ನೀವು ತಿಳಿದುಕೊಂಡಿರಬಹುದು.

ಶ್ರೀ ವೇದಾಂತ ಹೆಬ್ಬಿಗೆ.—ನಾನು ಬಹಳ ಜವಾಬ್ದಾರಿಯಿಂದ ಹೇಳುತ್ತಿದ್ದೇನೆ.

ಅಧ್ಯಕ್ಷರು.—ಮಾನ್ಯ ವಿಪ್‌ರವರೇ ಅಲ್ಲಿ ಹೋಗ್ರಿ, ನೀವು ಎಂಥ ವಿಪ್ ರೀ ? ನೀವು ಏನು ವಿಪ್ ಕೆಲಸ ಮಾಡುತ್ತೀರಿ ? ಮಾನ್ಯ ಸದಸ್ಯರಾದ ಪಾಟೀಲ್‌ರವರು ಎಷ್ಟು ಚೆನ್ನಾಗಿ ಉತ್ತರವನ್ನು ಕೊಟ್ಟರು ನೋಡಿ. ಅವರು ಬಹಳ ಸೂಕ್ಷ್ಮವಾಗಿ ಉತ್ತರವನ್ನು ಕೊಟ್ಟರು. ನೀವು ಹೋಗಿ ಅವರಿಗೆ ಸಮಾಧಾನ ಮಾಡಿ ಹೋಗ್ರಿ.

ಮಾನ್ಯ ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸುವ ವಂದನಾ ನಿರ್ಣಯದ ಮೇಲಿನ ಚರ್ಚೆ

ಶ್ರೀ ಹೆಚ್. ಟಿ. ಕೃಷ್ಣಪ್ಪ (ನಾಗಮಂಗಲ).—ಸನ್ಮಾನ್ಯ ಅಧ್ಯಕ್ಷರೆ ಮಾನ್ಯ ರಾಜ್ಯಪಾಲರು ತಾ. ೨೦-೧-೮೬ರಂದು ವಿಧಾನ ಮಂಡಲದ ಸದಸ್ಯರನ್ನುದ್ದೇಶಿಸಿ ಮಾಡಿದ ಭಾಷಣಕ್ಕಾಗಿ ವಿಧಾನ ಸಭೆಯ ಸದಸ್ಯರಾದ ನಾವು ಮಾನ್ಯ ರಾಜ್ಯಪಾಲರಿಗೆ ಹೃತ್ಪೂರ್ವಕವಾದ ವಂದನೆಗಳನ್ನರ್ಪಿಸಲು ತಮ್ಮ ಅಪ್ಪಣೆ ಕೋರುತ್ತೇವೆ.

ಶ್ರೀ ಬಿ. ಜೆ. ಕೊಟ್ರಪ್ಪ. (ಹರಿಹರ).—''ಮಾನ್ಯ ಅಧ್ಯಕ್ಷರೆ, ನನ್ನ ಮಾನ್ಯ ಸಹ ಸದಸ್ಯರಾದ ಕೃಷ್ಣಪ್ಪನವರು ಮಂಡಿಸಿದಂಥ ಮಾನ್ಯ ರಾಜ್ಯಪಾಲರ ಭಾಷಣದ ಮೇಲಿನ ವಂದನಾರ್ಪಣಾ ಸೂಚನೆಯನ್ನು ನಾನು ಅನುಮೋದಿಸುತ್ತೇನೆ.''

ಅಧ್ಯಕ್ಷರು.—ಪ್ರಸ್ತಾವವನ್ನು ಮಂಡಿಸಲಾಯಿತು, ಈಗ ಮಾನ್ಯ ಕೃಷ್ಣಪ್ಪನವರು ಮಾತನಾಡಬಹುದು.

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಸನ್ಮಾನ್ಯ ಅಧ್ಯಕ್ಷರೆ. ಮಾನ್ಯ ರಾಜ್ಯಪಾಲರು ಮಾಡಿರತಕ್ಕ ಭಾಷಣವನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸಿ ಕೆಲವು ವಿಚಾರಗಳನ್ನು ಈ ಸದನದಲ್ಲಿ ಪ್ರಸ್ತಾಪ ಮಾಡಬೇಕೆಂದು ಇಚ್ಛೈಯುಳ್ಳವನಾಗಿದ್ದೇನೆ.

ಯಾವುದೇ ಸರ್ಕಾರದ ಸಾಮರ್ಥ್ಯ ಮತ್ತು ಸಾಧನಗಳನ್ನು ಅಳೆಯುವುದಕ್ಕೆ ಮೊದಲು ಸರ್ಕಾರ ಆಯಾಯ ಕಾಲದಲ್ಲಿ ಎದುರಿಸುತ್ತಿರತಕ್ಕ ವಿಶಿಷ್ಟವಾದ ಸನ್ನಿವೇಶಗಳು. ಸಮಸ್ಯೆಗಳು ಏನು ಎಂಬುದನ್ನು ಅರ್ಥಮಾಡಿಕೊಳ್ಳುವುದು ಬಹಳ ಮುಖ್ಯ. ಈಗಾಗಲೇ ಈ ಸದನದ ಮಾನ್ಯ ಸದಸ್ಯರು ೪ ದಿವಸ ಕಾಲ ಚರ್ಚೆ ಮಾಡಿರತಕ್ಕ ವಿಚಾರ ನಮಗೆಲ್ಲರಿಗೂ ಗೊತ್ತಿರತಕ್ಕದ್ದೇ ಆಗಿದೆ. ಹಿಂದೆಂದೂ ಬಾರದಿದ್ದಂಥ ಒಂದು ಭೀಕರ ಬರಗಾಲದ ಪರಿಸ್ಥಿತಿಯನ್ನು ನಮ್ಮ ರಾಜ್ಯ ಇಂದು ಎದುರಿಸುತ್ತಿದೆ. ಸುಮಾರು ೩ ವರ್ಷಗಳಿಗಿಂತಲೂ ಹೆಚ್ಚಿನಕಾಲ ಬರಗಾಲ ನಮ್ಮ ರಾಜ್ಯದಲ್ಲಿ ಮುಂದುವರಿದದ್ದು ಇದೇ ಮೊದಲು, ದಿನಗಳೆದಂತೆ ಪರಿಸ್ಥಿತಿ ಕ್ಲಿಷ್ಟವಾಗುತ್ತಾ ಹೋಯಿತೇ ಹೊರತು ಅದು ಕಡಿಮೆಯಾಗತಕ್ಕ ಲಕ್ಷಣಗಳು ಯಾವುದೂ ಕಂಡುಬರಲಿಲ್ಲ. ಇಷ್ಟು ದೀರ್ಘಾವಧಿ ಕ್ಷಾಮ ಪರಿಸ್ಥಿತಿಯನ್ನು ಎದುರಿಸತಕ್ಕದ್ದರ ಜೊತೆಗೆ ಇನ್ನೊಂದು ಅಂಶವನ್ನು ನಾವು ಗಮನದಲ್ಲಿಟ್ಟುಕೊಳ್ಳಬೇಕು. ಹಿಂದೆ ನಮ್ಮ ದೇಶದಲ್ಲಿ ಕ್ಷಾಮ ಬರುತ್ತಿರಲಿಲ್ಲವೆಂದು ನಾವು ಹೇಳುವ ಹಾಗಿಲ್ಲ. ಹಿಂದೆಯೂ ಕ್ಷಾಮ ಬರುತ್ತಿತ್ತು. ಆದರೆ ಹಿಂದೆ ಬರುತ್ತಿದ್ದ ಕ್ಷಾಮ ಪರಿಸ್ಥಿತಿ ಯಾವುದೋ ಒಂದೆರಡು ಜಿಲ್ಲೆಗಳಿಗೆ ಸೀಮಿತವಾಗಿರುತ್ತಿತ್ತು. ಅಷ್ಟೇ ಅಲ್ಲ ಹಿಂಗಾರು ಮಳೆ ಹೋದರೆ ಮುಂಗಾರು ಮಳೆ ಬರುತ್ತಿತ್ತು. ಮುಂಗಾರು ಮಳೆ ಹೋದರೆ ಹಿಂಗಾರು ಮಳೆ ಆಗುತ್ತಿತ್ತು. ಅಥವಾ ಒಂದು ವರ್ಷ ಕ್ಷಾಮ ಬಂದರೆ ಅದರ ಮಾರನೇ ವರ್ಷ ಆ ಪರಿಸ್ಥಿತಿ ನಿವಾರಣೆ ಆಗುತ್ತಿತ್ತು. ಹೀಗಾಗಿ ನಾವು ಈ ವರ್ಷ ಎದುರಿಸುತ್ತಿರತಕ್ಕ ಬರಗಾಲ ಪರಿಸ್ಥಿತಿಗೂ ಹಿಂದೆ ನಾವು ಎದುರಿಸುತ್ತಿದ್ದ ಬರಗಾಲ ಪರಿಸ್ಥಿತಿಗೂ ಬಹಳ ಪ್ರತ್ಯಾಸ ಇದೆಯೆಂಬುದನ್ನು ನಾವು ಇವತ್ತು ಮನಗಾಣಬೇಕಾಗಿದೆ. ಇಂಥ ಒಂದು ಕಠಿಣ ಪರಿಸ್ಥಿತಿಯನ್ನು ನಮ್ಮ ಸರ್ಕಾರ ಎಷ್ಟರಮಟ್ಟಿಗೆ ಎದುರಿಸಿದೆ ಅಥವಾ ಎದುರಿಸುವುದಕ್ಕೆ ಸಿದ್ಧತೆಗಳನ್ನು ಮಾಡಿಕೊಂಡಿದೆ ಎಂಬುದನ್ನು ನಾವು ವಿಚಾರ ಮಾಡಬೇಕಾಗಿದೆ. ಬರಗಾಲ ಎಂದ ಕೂಡಲೇ ನಮಗೆ ಅರ್ಥವಾಗತಕ್ಕದ್ದು ಆಹಾರಭಾವ. ನೀರಿನ ಅಭಾವ ಮತ್ತು ಗ್ರಾಮಾಂತರ ಪ್ರದೇಶದಲ್ಲಿ ವಾಸಮಾಡತಕ್ಕ ಜನಗಳ ನಿರುದ್ಯೋಗ ಸಮಸ್ಯೆ. ಆದರೆ ಈ ಸಾರಿ ಇನ್ನೊಂದು ಹೊಸ ಸಮಸ್ಯೆಯನ್ನು ನಾವು ಕಾಣುತ್ತಿದ್ದೇವೆ. ಅದು ಏನೆಂದರೆ ದನಗಳ ಮೇವಿನ ಸಮಸ್ಯೆ. ಈ ನಾಲ್ಕೂ ಸಮಸ್ಯೆಗಳನ್ನು ನಮ್ಮ ಸರ್ಕಾರ ಯಾವ ರೀತಿ ಎದುರಿಸುವುದಕ್ಕೆ ಸಿದ್ಧತೆಯನ್ನು ಮಾಡಿಕೊಂಡಿದೆ ಎಂಬುದನ್ನು ನಾವು ಪ್ರಸ್ತಾಪ ಮಾಡಬೇಕಾಗಿದೆ.